**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.580/2016 DW–1**

**ದಿನಾಂಕ: 29.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಯೋಗೀಶ್.ಬಿ.ಆರ್ |
| ತಂದೆಯ ಹೆಸರು | : | ರಾಮಕೃಷ್ಣ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ತಿಪಟೂರು ಟೌನ್ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ಫಿರ್ಯಾದಿಯಾದ ರೇಣುಕಾಸ್ವಾಮಿ ನನ್ನ ವಿರುದ್ಧ ದೂರನ್ನು ದಾಖಲಿಸಿದ್ದು ನಾನು ಈ ಪ್ರಕರಣದಲ್ಲಿ ಆರೋಪಿತನಾಗಿರುತ್ತೇನೆ. ಫಿರ್ಯಾದಿಯ ಪರಿಚಯ ನನಗೆ ಇದೆ. ನನ್ನ ಸ್ನೇಹಿತನಾದ ಎಸ್.ಎಸ್.ಶೇಖರ್ ನನ್ನ 2015 ರಲ್ಲಿ ಬಳಿ ಬಂದು ಸಾಲವನ್ನು ಕೇಳಿರುತ್ತಾರೆ. ಆ ಕಾಲಕ್ಕೆ ನನ್ನ ಬಳಿ ಸಾಲ ಇಲ್ಲದಿದ್ದ ಕಾರಣ ನನ್ನ ಪರಿಚಸ್ಥನಾದ ಫಿರ್ಯಾದಿಯ ಬಳಿ ಎಸ್.ಎಸ್.ಶೇಖರ್ ರವರನ್ನು ಕರೆದುಕೊಂಡು ಹೋಗಿ 2 ಲಕ್ಷ ಸಾಲವನ್ನು ಕೊಡಿಸಿರುತ್ತೇನೆ. ಆ ಕಾಲಕ್ಕೆ ಫಿರ್ಯಾದಿಯು ಎಸ್.ಎಸ್.ಶೇಖರ್ ರವರಿಂದ 2 ಚೆಕ್ಕು, 1 ಮೂಲ ಕ್ರಯಪತ್ರ ಹಾಗೂ ಒಂದು ಕರಾರನ್ನು ಬರೆಸಿಕೊಂಡಿರುತ್ತಾರೆ. ನನ್ನಿಂದ ಜಾಮೀನುದಾರರಾಗಿ 4 ಚೆಕ್ಕುಗಳನ್ನು ಪಡೆದಿರುತ್ತಾರೆ. ಫಿರ್ಯಾದಿಯು ಎಸ್.ಎಸ್.ಶೇಖರ್ ರವರಿಗೆ 3% ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟಿರುತ್ತಾರೆ. ಎಸ್.ಎಸ್.ಶೇಖರ್ ರವರು ಫಿರ್ಯಾದಿಗೆ ಪ್ರತಿ ತಿಂಗಳು ಬಡ್ಡಿಯನ್ನು ಕೊಡುತ್ತಿದ್ದರು. ನಂತರ ಎಸ್.ಎಸ್.ಶೇಖರ್ ರವರಿಗೆ ಮನೆಯಲ್ಲಿ ಸ್ವಲ್ಪ ಆರ್ಥಿಕ ಸಮಸ್ಯೆಯಾದ ಕಾರಣ ಬಡ್ಡಿ ದರವನ್ನು ಕಡಿಮೆ ಮಾಡುವಂತೆ ನಾನು ಮತ್ತು ಶೇಖರ್ ರವರು ಫಿರ್ಯಾದಿಯ ಬಳಿ ಹೋಗಿ ಕೇಳಿಕೊಂಡೆವು. ಆಗ ಫಿರ್ಯಾದಿಯು ಬಡ್ಡಿ ದರವನ್ನು ಕಡಿಮೆ ಮಾಡುವುದಿಲ್ಲ, ನಾನು ನೀಡಿದ ಹಣವನ್ನು ಬಡ್ಡಿ ಸಮೇತ ಕೂಡಲೇ ಕೊಡಿ ಎಂದು ಎಸ್.ಎಸ್.ಶೇಖರ್ ರವರನ್ನು ಹಾಗೂ ನನ್ನನ್ನು ಒತ್ತಾಯ

ಮಾಡಿರುತ್ತಾರೆ.

ಎಸ್.ಎಸ್.ಶೇಖರ್ ರವರು ಹಾಗೂ ನಾನು ಅಸಲಾದ 2 ಲಕ್ಷ ಹಣವನ್ನು ಫಿರ್ಯಾದಿಯ ಬಳಿ ತೆಗೆದುಕೊಂಡು ಹೋಗಿ, ಅಸಲನ್ನು ತೆಗೆದುಕೊಂಡು ಬಡ್ಡಿಯನ್ನು ಬಿಡಿ ಎಂದು ಕೇಳಿದಾಗ ಫಿರ್ಯಾದಿಯು ಅದಕ್ಕೆ ಒಪ್ಪಿರುವುದಿಲ್ಲ. ಫಿರ್ಯಾದಿಯು ನನ್ನ ಮೇಲೆ ದೌರ್ಜನ್ಯ ಮಾಡಿ ಜೋರಾಗಿ ಮಾತನಾಡಿ ಕಳುಹಿಸಿರುತ್ತಾರೆ. ನಂತರ ಫಿರ್ಯಾದಿಯು ನಾನು ಕೊಟ್ಟ 4 ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದು ಅದರ ಆಧಾರದ ಮೇಲೆ ನನ್ನ ವಿರುದ್ಧ 4 ಲಕ್ಷ 75 ಸಾವಿರ ರೂಪಾಯಿಗಳಿಗೆ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ನಂತರ ಈ ಪ್ರಕರಣದಲ್ಲಿ ನಾನು ಮತ್ತು ಫಿರ್ಯಾದಿಯು ರಾಜೀ ಮಾಡಿಕೊಳ್ಳಲು ಒಪ್ಪಿ ರಾಜಿ ಮೆಮೋವನ್ನು 4 ಲಕ್ಷ 50 ಸಾವಿರ ರೂಪಾಯಿ ಕೊಡುವಂತೆ ಒಪ್ಪಿ ದಾಖಲು ಮಾಡಿರುತ್ತೇವೆ. ಸದರಿ ಜಂಟಿ ರಾಜೀ ಮೆಮೋ ಪ್ರಕಾರ ಇದೇ ನ್ಯಾಯಾಲಯದ ಮುಂದೆ 2 ಲಕ್ಷ 50 ಸಾವಿರ ರೂಪಾಯಿ ಹಣವನ್ನು ಫಿರ್ಯಾದಿಗೆ ಕೊಟ್ಟಿರುತ್ತೇನೆ. ನಂತರ ರಾಜೀಯಲ್ಲಿ ಉಳಿದ ಹಣವನ್ನು ತಿಂಗಳಿಗೆ 40 ಸಾವಿರದಂತೆ ಕೊಡಲು ನಾನು ಹಾಗೂ ಫಿರ್ಯಾದಿ ಒಪ್ಪಿದ್ದು ಈ ಪ್ರಕಾರ ನಾನು 3 ತಿಂಗಳು 40 ಸಾವಿರ ತಿಂಗಳಿಗೆ ಹಣವನ್ನು ಕೊಟ್ಟಿರುತ್ತೇನೆ. ಇನ್ನು 80 ಸಾವಿರ ಹಣ ಕೊಡುವುದು ಬಾಕಿ ಇತ್ತು.

ಮೇಲೆ ಹೇಳಿದ ಜಂಟಿ ಮೆಮೋದಲ್ಲಿ ನಾನು ಪೂರ್ತಿ ಹಣವನ್ನು ಫಿರ್ಯಾದಿಗೆ ಕೊಟ್ಟಲ್ಲಿ ಫಿರ್ಯಾದಿ ನನಗೆ ಶೇಖರ್ ರವರು ನೀಡಿದ 2 ಚೆಕ್ಕು, ಒಂದು ಕ್ರಯಪತ್ರ, ಕರಾರನ್ನು ಮತ್ತು ನನ್ನ ಉಳಿದ 3 ಚೆಕ್ಕುಗಳನ್ನು ವಾಪಾಸ್ ಕೊಡುವುದಾಗಿ ಒಪ್ಪಿಕೊಳ್ಳಲಾಗಿತ್ತು.

ನಾನು ಎಸ್.ಎಸ್.ಶೇಖರ್ ರವರ ಪರವಾಗಿ ಜಾಮೀನುದಾರನಾಗಿ ಫಿರ್ಯಾದಿಗೆ ಹಣವನ್ನು ಕೊಟ್ಟಿದ್ದು ಸದರಿ ಹಣವನ್ನು ಎಸ್.ಎಸ್.ಶೇಖರ್ ರವರಿಂದ ವಸೂಲಿ ಮಾಡುವ ಕಾರಣಕ್ಕಾಗಿ ಸದರಿ ಜಂಟಿ ಮೆಮೋದಲ್ಲಿ ಎಸ್.ಎಸ್.ಶೇಖರ್ ರವರು ನೀಡಿದ ದಾಖಲಾತಿಗಳನ್ನು ನನಗೆ ಕೊಡುವಂತೆ ಒಪ್ಪಿಕೊಳ್ಳಲಾಗಿತ್ತು.

ಉಳಿದ 80 ಸಾವಿರ ಹಣವನ್ನು ನಾನು ನ್ಯಾಯಾಲಯಕ್ಕೆ ಬಂದು ಫಿರ್ಯಾದಿಗೆ ಕೊಡಲು ಬಂದಿದ್ದಾಗ ಫಿರ್ಯಾದಿಯು ಜಂಟಿ ಮೆಮೋದಲ್ಲಿ ಕೇಳಿದ್ದ ದಾಖಲಾತಿಗಳನ್ನು ತಂದಿರಲಿಲ್ಲ. ಆದ ಕಾರಣ ಆತನು ಜಂಟಿ ಮೆಮೋದಲ್ಲಿ ನಮೂದು ಮಾಡಿದ ಎಲ್ಲಾ ದಾಖಲಾತಿಗಳನ್ನು ಕೊಡುವವರೆಗೂ ಫಿರ್ಯಾದಿಗೆ ಹಣ ಕೊಡುವುದನ್ನು ಮುಂದೂಡುತ್ತಿದ್ದೇನೆ.

ನಂತರ ಫಿರ್ಯಾದಿಗೆ ನಾನು 80 ಸಾವಿರ ಹಣವನ್ನು ದಾಖಲಾತಿಗಳಿಲ್ಲದೇ ಕೊಡುವುದಿಲ್ಲವೆಂದು ತಿಳಿದು, ಎಸ್.ಎಸ್.ಶೇಖರ್ ರವರ ವಿರುದ್ಧ ಚೆಕ್ ಬೌನ್ಸ್ ಪ್ರಕರಣವನ್ನು ಬೇರೆಯವರ ಹೆಸರಿನಲ್ಲಿ ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣದಲ್ಲಿ ಫಿರ್ಯಾದಿಯು ಎಸ್.ಎಸ್.ಶೇಖರ್ 3 ಲಕ್ಷ 80 ಸಾವಿರ ಹಣವನ್ನು ರಾಜೀ ಮಾಡಿಕೊಂಡು ಪಡೆದುಕೊಂಡಿರುತ್ತಾರೆ.

ಎಸ್.ಎಸ್.ಶೇಖರ್ ರವರು ಮೇಲೆ ಹೇಳಿದ ಹಣವನ್ನು ಕೊಟ್ಟು ಫಿರ್ಯಾದಿಯಿಂದ ಈ ಪ್ರಕರಣದಲ್ಲಿ ಜಂಟಿ ಮೆಮೋದಲ್ಲಿ ನಮೂದು ಮಾಡಿದ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡು ಹೋಗಿರುತ್ತಾನೆ. ಆದ್ದರಿಂದ ನಾವು ಸಲ್ಲಿಸಿದ ಜಂಟಿ ಮೆಮೋ ಪ್ರಕಾರ ನಾನು ಕೇಳಿದ ಎಲ್ಲಾ ದಾಖಲಾತಿಗಳನ್ನು ಕೊಡದೇ 80 ಸಾವಿರ ಹಣವನ್ನು ಕೊಡಲು ಆಗುವುದಿಲ್ಲ.

ನಂತರ ಫಿರ್ಯಾದಿಯು ನಾನು ಕೊಟ್ಟಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಬೇರೆ ವ್ಯಕ್ತಿಯಾದ ರಘುರವರ ಮುಖಾಂತರ 2 ಚೆಕ್ ಬೌನ್ಸ್ ನೋಟೀಸನ್ನು ನನಗೆ ನೀಡಿರುತ್ತಾರೆ. ಒಂದು ನೋಟೀಸನ್ನು 5 ಲಕ್ಷ ರೂಪಾಯಿಗಳಿಗೆ ಹಾಗೂ ಮತ್ತೊಂದು ನೋಟೀಸನ್ನು 7 ಲಕ್ಷದ 75 ಸಾವಿರ ರೂಪಾಯಿಗಳಿಗೆ ಕೊಟ್ಟಿರುತ್ತಾರೆ. ಸದರಿ ರಘು ಎಂಬ ವ್ಯಕ್ತಿಯು ಯಾರು ಎಂದು ನನಗೆ ಗೊತ್ತಿಲ್ಲ.

ನಾನು ಫಿರ್ಯಾದಿಯಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ. ಕೇವಲ ಶೇಖರ್ ರವರು ಪಡೆದ ಸಾಲಕ್ಕೆ ಜಾಮೀನುದಾರನಾಗಿ ನಿಂತಿದ್ದು, ಎಸ್.ಎಸ್.ಶೇಖರ್ ರವರು ಕೊಡಬೇಕಾದ ಸಾಲವನ್ನು ನಾನು ಮರುಪಾವತಿ ಮಾಡಿರುವ ಕಾರಣ, ಈ ಪ್ರಕರಣದಲ್ಲಿ ಸಲ್ಲಿಸಿರುವ ಜಂಟಿ ಮೆಮೋದ ಪ್ರಕಾರ ನನಗೆ ಒದಗಿಸಬೇಕಾದ ಎಲ್ಲಾ ದಾಖಲಾತಿಗಳನ್ನು ಫಿರ್ಯಾದಿಯು ಒದಗಿಸಿದ್ದಲ್ಲಿ ನಾನು ಉಳಿದ 80 ಸಾವಿರ ಹಣವನ್ನು ಕೊಡಲು ಸಿದ್ಧನಿದ್ದೇನೆ. ಇಲ್ಲವಾದಲ್ಲಿ ನಾನು ನೀಡಿದ ಹಣವನ್ನು ಫಿರ್ಯಾದಿಗೆ ವಾಪಾಸ್ ಮಾಡಲು ಬದ್ಧನಾಗಿರುತ್ತೇನೆ. ಈ ಪ್ರಕರಣದಲ್ಲಿ ನಾನು ಯಾವುದೇ ತಪ್ಪು ಮಾಡಿರುವುದಿಲ್ಲ. ಆದ್ದರಿಂದ ಈ ಪ್ರಕರಣವನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಲು ಕೋರಿಕೊಳ್ಳುತ್ತಾರೆ. ನಿಡಿ-1 ರಿಂದ 4 ನೋಟೀಸ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ 4 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**